ವಿಷಯ : ರಾಜ್ಯದಲ್ಲಿ ಪ್ರೌಢಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳ ಹಂಚಿಕೆ.

220 (1874)-ಶ್ರೀ ಡಿ. ಆರ್. ಪಾಟೀಲ್ (ಗದಗ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಜಿಲ್ಲೆಯ ಜನಸಂಖ್ಯೆಯನ್ನು ಆಧಾರವಾಗಿಟ್ಟು ನೋಡಿದಾಗ ಇಲ್ಲಿಯವರೆಗೆ ಪ್ರಾರಂಭಿದ ಸರ್ಕಾರ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳ ಹಂಚಿಕೆಯಲ್ಲಿ ತಾರತಮ್ಯವಾಗಿದೆಯೆ (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ತಾರತಮ್ಯವಾಗಿದ್ದರೆ ಇದನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಇ) ಈ ತಾರತಮ್ಯಗಳನ್ನು 9ನೇ ಯೋಜನೆ ಅವಧಿಯಲ್ಲಿ ಸಂಪೂರ್ಣವಾಗಿ ಸರಿಪಡಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೆ

ಈ) ಈ ರೀತಿ ಕ್ರಮ ಕೈಗೊಳ್ಳಲು ಇರುವ ತೊಂದರೆಯೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು)

ಅ) ಜಿಲ್ಲೆಯ ಜನಸಂಖ್ಯೆಯನ್ನು ಆಧಾರವಾಗಿಟ್ಟು ಕೊಂಡು ಪದವಿ ಪೂರ್ವ ಕಾಲೇಜುಗಳನ್ನು ಹಾಗೂ ಪ್ರೌಢಶಾಲೆಗಳನ್ನು ಮಂಜೂರು ಮಾಡುವುದಿಲ್ಲ. ಆಗತ್ಯತೆಗೆ ಅನುಗುಣವಾಗಿ ಮತ್ತು ಪೋಷಕ ಶಾಲೆಗಳ ಮತ್ತು ಮಂಜೂರು ಮಾಡಲಾಗುತ್ತದೆ. ಆದ್ದರಿಂದ ತಾರತಮ್ಯದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಅವಶ್ಯಕತೆ ಹಾಗೂ ಬೇಡಿಕೆಗಳಿಗೆ ಅನುಗುಣವಾಗಿ ಮುಂಬರುವ ವರ್ಷಗಳಲ್ಲಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ತೆರೆಯಲು ಪರಿಶೀಲಿಸಲಾಗುವುದು.

ಈ) ಪ್ರಶ್ನೆ ಉದ್ಭವಿಸುವುದಿಲ್ಲ

ಶ್ರೀ ಡಿ. ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಏನೋ ಒಬ್ಬ ದಕ್ಷ ಪ್ರಾಮಾಣಿಕಲ ಸಚಿವರು ನಮಗೆ ಸಿಕ್ಕಿರುವುದರಿಂದ ಅವರ ಗಮನಕ್ಕೆ ನಮಗೆ ಅನ್ಯಾಯವಾಗುತ್ತಿದೆ ಎಂಬುದನ್ನು ಆ ಅನ್ಯಾಯವನ್ನು ಸರಿಪಡಿಸುತ್ತಾರೆಂದು ನಾನು ಈ ಪ್ರಶ್ನೆಯನ್ನು ಹಾಕಿದೆ. ಆದರೆ ಪ್ರಶ್ನೆಗೆ ಬಂದ ಉತ್ತರವೇನೆಂದರೆ, ಅನ್ಯಾಯವಾಗಿರುವುದನ್ನು ತಿಳಿಯಲಾರದಂತೆ ಉತ್ತರವನ್ನು ಕೊಟ್ಟಿದ್ದಾರೆ. ಏನು ಉತ್ತರವನ್ನು

ಕೊಟ್ಟದ್ದಾರೆಂದು ಓದುತ್ತೇನೆ ತಮಗೂ ಗೊತ್ತಾಗುತ್ತದೆ. ನನ್ನ 'ಅ' ಪ್ರಶ್ನೆ ಹೀಗಿದೆ. ಜಿಲ್ಲೆಯ ಜನಸಂಖ್ಯೆಯನ್ನು ಆಧಾರವಾಗಿಟ್ಟು ನೋಡಿದಾಗ ಇಲ್ಲಿಯವರೆಗೆ ಪ್ರಾರಂಭಿಸಿದ ಸರ್ಕಾರ ಪ್ರೌಢ ಶಾಲೆ ಪದವಿ ಪೂರ್ವ ಕಾಲೇಜುಗಳ ಹಂಚಿಕೆಯಲ್ಲಿ ತಾರತಮ್ಯವಾಗಿದೆಯೇ? ಎಂದು ಅದಕ್ಕೆ ಅವರು ಉತ್ತರವನ್ನು ಕೊಟ್ಟಿರುವುದು "ಜಿಲ್ಲೆಯ ಜನಸಂಖ್ಯೆಯನ್ನು ಆಧಾರವಾಗಿಟ್ಟು ಕೊಂಡು ಪದವಿ ಪೂರ್ವ ಕಾಲೇಜುಗಳನ್ನು ಮತ್ತು ಪ್ರೌಢ ಶಾಲೆಗಳನ್ನು ಮಂಜೂರು ಮಾಡುವುದಿಲ್ಲ." ಅಗತ್ಯತೆಗೆ ಅನುಗುಣವಾಗಿ ಮತ್ತು ಪೋಷಕ ಶಾಲೆಗಳ ಮತ್ತು ವಿದ್ಯಾರ್ಥಿಗಳ ಸಂಖ್ಯೆಯನ್ನು ಆಧಾರಿಸಿ ಮಂಜೂರು ಮಾಡಲಾಗುತ್ತದೆ ಎಂದು ಹೇಳಿದ್ದಾರೆ ಆಧಾರಿಸಿಯೇ ಹೇಳಿ. ನಿಮ್ಮ ಅಳತೆಯ ಗೋಲು ಏನಿದೆ ಇದನ್ನು ಆಧಾರಿಸಿಯೇ ಜಿಲ್ಲಾವಾರು ಏನು ಪರಿಸ್ಥಿತಿ ಇದೆ? ಈಗ ಎಷ್ಟು ಶಾಲಾ ಕಾಲೇಜುಗಳಿವೆ? ಈ ಮಾಹಿತಿಯನ್ನು ಕೊಟ್ಟರೆ ನಮಗೆ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸುವುದಕ್ಕೆ 9ನೇಯ ಯೋಜನೆಯಲ್ಲಿ ನೀವು ಏನು ವಿಶೇಷ ಕ್ರಮವನ್ನು ಕೈಗೊಳ್ಳುತ್ತೀರಿ? ಇವುಗಳು ನನ್ನ ಪ್ರಶ್ನೆ. ದಯವಿಟ್ಟು ಈ ಸಮಸ್ಯೆಗಳನ್ನು ಬಗೆಹರಿಸಿ ಬಿಟ್ಟರೆ ಸಾಕು.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ ಸ್ನೇಹಿತರ ಮನಸ್ಸಿನಲ್ಲಿರತಕ್ಕಂತಹ ನೋವು ಏನು ಎಂದು ನಾನು ಅರ್ಥಮಾಡಿಕೊಂಡಿದ್ದೇನೆಂದು ತಮ್ಮ ಮುಂದೆ ಹೇಳುತ್ತೇನೆ. ಉತ್ತರ ಕರ್ನಾಟಕದಲ್ಲಿ ಹೆಚ್ಚು ಪದವಿ ಪೂರ್ವ ಕಾಲೇಜುಗಳು ಮತ್ತು ಪ್ರೌಢ ಶಾಲೆಗಳು ಸರ್ಕಾರದ ವತಿಯಿಂದ ಹೆಚ್ಚು ಇಲ್ಲ ಎಂದು ನನ್ನ ಸ್ನೇಹಿತರ ನೋವು. ಇದನ್ನು ನಾನೂ ಸಹ ಒಪ್ಪಿಕೊಳ್ಳತ್ತೇನೆ. ಕಾರಣ ಏನು ಎಂದರೆ ಬಹಳ ವರ್ಷಗಳಿಂದ ಉತ್ತರ ಕರ್ನಾಟಕದಲ್ಲಿ ಹೆಚ್ಚು ಪದವಿ ಪೂರ್ವ ಕಾಲೇಜುಗಳು ಮತ್ತು ಪ್ರೌಢ ಶಾಲೆಗಳು ಸರ್ಕಾರದ ವತಿಯಿಂದ ಹೆಚ್ಚು ಇಲ್ಲ ಎಂದು ನನ್ನ ಸ್ನೇಹಿತರ ನೋವು. ಇದನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಕಾರಣ ಏನು ಎಂದರೆ ಬಹಳ ವರ್ಷಗಳಿಂದ ಉತ್ತರ ಕರ್ನಾಟಕದಲ್ಲಿ ಸರ್ಕಾರದಿಂದ ಪ್ರೌಢಶಾಲೆಗಳನ್ನಾಗಲಿ, ಪದವಿ ಪೂರ್ವ ಕಾಲೇಜುಗಳನ್ನಾಗಲಿ ತೆರೆದಿಲ್ಲ. ಆದರೆ ಮಠಾಧಿಪತಿಗಳು, ಸಾರ್ವಜನಿಕರು, ಮತ್ತು ವಿದ್ಯೆಯ ಬಗ್ಗೆ ಗೌರವ ಇರತಕ್ಕಂತಹ ಜನ ಮುಂದೆ ಶಾಲೆಗಳನ್ನು, ಕಾಲೇಜುಗಳನ್ನು ಪ್ರಾರಂಭ ಮಾಡಿದ್ದಾರೆ. ಬಹುಶಃ ಶಾಲೆಗಳನ್ನು ಮತ್ತು ಕಾಲೇಜುಗಳನ್ನು ಪ್ರಾರಂಭ ಮಾಡದೇ ಇದ್ದಿದ್ದರೆ, ಅಲ್ಲಿ ವಿದ್ಯಾಭ್ಯಾಸಕ್ಕೆ ವಂಚನೆಯಾಗುತ್ತಿತ್ತೇನೋ ಏನು ಎಂಬ ವಿಷಯ ನನಗೂ ಕೂಡ ಅರ್ಥವಾಗಿದೆ. ಬಹುಶಃ ಅವರಿಗೂ ಕೂಡ ಅರ್ಥವಾಗಿಯೇ ಈ ಪ್ರಶ್ನೆಯನ್ನು ಕೇಳಿದ್ದಾರೆ. ಅವರ ಕೇಳಿರತಕ್ಕಂತಹ ಉದ್ದೇಶವೆನೆಂದರೆ ಉತ್ತರ ಕರ್ನಾಟಕದಲ್ಲಿ ಸರ್ಕಾರಿ ಪದವೀಪೂರ್ವ ಕಾಲೇಜುಗಳು, ಪ್ರೌಢಶಾಲೆಗಳು ಹೆಚ್ಚಿಗೆ ರೀತಿಯಲ್ಲಿ ಕೊಡಬೇಕು ಎನ್ನುವುದೇ ಅವರ

ಮನಸ್ಸಿನಲ್ಲಿರತಕ್ಕಂತಹ ನೋವು. ಈ ವರ್ಷದ ಬಜೆಟ್‌ನಲ್ಲಿಯೂ ಸಹ ಇದಕ್ಕೆ ಅವಕಾಶ ಇಲ್ಲ. ಅವಕಾಶ ಇದ್ದಾಗ ಖಂಡಿತವಾಗಿ ನಿಮ್ಮ ಮನಸ್ಸಿನಲ್ಲಿರತಕ್ಕಂಥ ನೋವು ಏನು ಎನ್ನುವುದನ್ನು ಅರ್ಥ ಮಾಡಿಕೊಂಡಿದ್ದೇನೆ. ಅದಕ್ಕೆ ಸರ್ಕಾರ ಸ್ಪಂದಿಸುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟವನ್ನು ಪಡುತ್ತೇನೆ.

ಶ್ರೀ ಡಿ. ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಗಳು ನಮ್ಮ ನೋವನ್ನು ಅರ್ಥ ಮಾಡಿಕೊಂಡಿದ್ದಾರೆ. ನೀವು ಗ್ರ್ಯಾಂಟ್‌ನ್ನು ಕೊಡುತ್ತಿದ್ದರೆ ನಾವು ಏನೂ ಸರ್ಕಾರಿ ಹೈಸ್ಕೂಲ್ ಬೇಕೆಂದು ಅಪೇಕ್ಷೆಯನ್ನು ಪಡುತ್ತಿರಲಿಲ್ಲ. ಹಿಂದಿನ ಹಾಗೆಯೇ ಮಠಾಧೀಶರಾಗಲಿ, ಅಥವಾ ಸ್ಥಳೀಯ ಸಂಸ್ಥೆಗಳೇ ಅದನ್ನು ಪ್ರಾರಂಭ ಮಾಡುತ್ತಿದ್ದವು. ಆದರೆ 1987ರಿಂದ ಇತ್ತೀಚೆಗೆ ಪ್ರಾರಂಭವಾಗುವಂತಹ ಯಾವುದೇ ಶಾಲೆಗಳಿಗೆ ಗ್ರಾಂಟ್ ಇಲ್ಲವೆಂದು ಸರ್ಕರದ ಒಂದು ನಿಯಮ ಇರುವುದರಿಂದ ನಾವು ಸರ್ಕಾರಿ ಶಾಲೆಗಳಿಗೆ ಈಗ ಅಪೇಕ್ಷೆಯನ್ನು ಪಡುತ್ತಿದ್ದೇವೆ. ತಮಗೆ ಗೊತ್ತಿದೆ ತಾವು ಅನ್ಯಾಯವನ್ನು ಒಪ್ಪಿಕೊಂಡ ಮೇಲೆ, 9ನೇ ಯೋಜನೆಯಲ್ಲಿ ಸರಿಪಡಿಸುವುದಕ್ಕೆ ಒಂದು ವಿಶೇಷ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರ ಮನಸ್ಸಿನಲ್ಲಿರತಕ್ಕಂತಹ ನೋವು ಏನು ಎಂದು ಅರ್ಥ ಮಾಡಿಕೊಂಡಿದ್ದೇನೆಂದು ಹೇಳಿದ್ದೇನೆ. ಅದಕ್ಕೆ ಸ್ಪಂದಿಸತಕ್ಕಂತಹ ಕರ್ತವ್ಯವು ಸರ್ಕಾರದೂ ಕೂಡ ಇದೆ. ಇದರ ಬಗ್ಗೆ ಚಿಂತನೆ ಮಾಡುತ್ತೇವೆಂದು ಹೇಳಿದ್ದೇನೆ

10.40 ಎಎಂ

ಶ್ರೀ ಅಶೋಕ್ ಕಾಟ್ವೆ : ಹೋದ ವರ್ಷ ಎಲ್ಲಾ ತಾಲ್ಲೂಕುಗಳಿಗೆ ಪ್ರೌಢಶಾಲೆಗಳನ್ನು ಕೊಟ್ಟಿದ್ದಾರೆ. ಹುಬ್ಬಳ್ಳಿ-ಧಾರವಾಡಕ್ಕೆ ಒಂದೂ ಪ್ರೌಢಶಾಲೆಯನ್ನು ಕೊಟ್ಟಿಲ್ಲ. ಅದಕ್ಕೆ ಈ ಸಲ ಹುಬ್ಬಳ್ಳಿ ಶಹರಕ್ಕೆ 7 ಸಾವಿರ ಜನ ವಿದ್ಯಾರ್ಥಿಗಳು 7ನೇ ತರಗತಿಯಲ್ಲಿ ಪಾಸಾಗುತ್ತಿದ್ದಾರೆ. ಅದಕ್ಕೆ ಪ್ರೌಡಶಾಲೆ ಇಲ್ಲದೇ ಇದ್ದರೆ, ನಾವೇನು ಮಾಡಬೇಕು? ಆದ್ದರಿಂದ, ಹುಬ್ಬಳ್ಳಿ-ಧಾರವಾಡಕ್ಕೆ ಪ್ರೌಢಶಾಲೆಗಳನ್ನು ಕೊಡಬೇಕು.

ಶ್ರೀ ಚಂದ್ರಕಾಂತ್ ಬೆಲ್ಲದ್ : ಮಾನ್ಯ ಸಚಿವರು ಹುಬ್ಬಳ್ಳಿ-ಧಾರವಾಡಕ್ಕೆ ಎರಡು ಪ್ರೌಢಶಾಲೆಗಳನ್ನು ಕೊಡುತ್ತೇನೆಂದು ಆಶ್ವಾಸನೆ ಕೊಟ್ಟಿದ್ದರು.

ಅಧ್ಯಕ್ಷರು : ಜಗದೀಶ ಶೆಟ್ಟರ್, ಅಶೋಕ್ ಕಾಟ್ವೆ, ಚಂದ್ರಕಾಂತ ಬೆಲ್ಲದ್‌ರವರೇ ಹುಬ್ಬಳ್ಳಿ-ಧಾರವಾಡ ಗ್ರಾಮೀಣ ಮತ್ತು ನಗರ ಇವೆಲ್ಲವನ್ನೂ ಅವರು ಕವರ್ ಮಾಡುತ್ತಾರೆ.

ಶ್ರೀ ಜಿ. ಎಸ್. ಯುಡಿಯೂರಪ್ಪ : ಏನಿಲ್ಲ ಸಾರ್, ಇದು ಕರೆಯುವ ಎಮ್ಮೆಯಾಗಿರುವುದರಿಂದ, ಹಾಲು ಕರೆಯುವ ಪ್ರಯತ್ನ ಮಾಡುತ್ತಿದ್ದಾರೆ ಗೊಡ್ಡು ಎಮ್ಮೆಯಾಗಿದ್ದರೆ. ಕೇಳುತ್ತಿರಲಿಲ್ಲ.

ಅಧ್ಯಕ್ಷರು : ಅಶೋಕ, ನೀವು ಮೂರೂ ಜನರು ಏನು ಬೇಡಿಕೆಯನ್ನು ತಿಳಿಸಿದ್ದೀರಿ, ಅದನ್ನು ಅವರು ಗಮನದಲ್ಲಿಟ್ಟು ಕೊಂಡು ಈ ಸಲ ಅವರು ಇಲಾಖೆ ಇದನ್ನೆಲ್ಲಾ ಅಲಾಟ್‌ಮೇಂಟ್ ಮಾಡುವಾಗ ಇದಕ್ಕೆ ಖಂಡಿತವಾಗಿ ಪೈಯಾರಿಟಿ ಕೊಡುತ್ತಾರೆ.

ವಿಷಯ : ಸೋಮವಾರ ಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ ಕುಡಿಯುವ ನೀರಿನ ಅಭಾವ.

221 (1864)-ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಸೋಮವಾರ ಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ ಕುಡಿಯುವ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆಬಂದಿದೆಯೇ ?

2) ಬಂದಿದ್ದಲ್ಲಿ ಸರ್ಕಾರದಿಂದ ಯಾವ ಕ್ರಮ ತೆಗೆದುಕೊಳ್ಳಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

1) ಇಲ್ಲ.

2) ಉದ್ಭವಿಸುವುದಿಲ್ಲ.

ಶ್ರೀ ಎಂ. ಪಿ. ಅಪ್ಪಚ್ಚುರಂಜನ್ : ಸನ್ಮಾನ್ಯ ಅಧ್ಯಕ್ಷರೆ ನಮ್ಮ ಸೋಮವಾರಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ ಕುಡಿಯುವ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದರೇ ಅವರು "ಇಲ್ಲ" ಎಂದು ಉತ್ತರ ಕೊಟ್ಟಿದ್ದಾರೆ. ಬಂದಿದ್ದರೆ, ಅದಕ್ಕೆ ಅವರು ಉದ್ಭವಿಸುವುದಿಲ್ಲವೆಂದು ಉತ್ತರಿಸಿದ್ದಾರೆ. ನಾನು ಕಳೆದ ಬಜೆಟ್ ಭಾಷಣದಲ್ಲೂ ಕೂಡ ನನ್ನ ಸೋಮವಾರ ಪೇಟೆ ತಾಲ್ಲೂಕಿನ ಸಾಧಾರಣ, ಹಾಸನ ಮತ್ತು ಮೈಸೂರಿಗೇ ಸೇರಿದ ರೀತಿಯಲ್ಲಿ ಸ್ವಲ್ಪ ಒಣ ಪ್ರದೇಶವೆಂದು ಹೇಳಿದರೂ ಕೂಡ ತಪ್ಪಾಗಲಾರದು. ಇದನ್ನು ಬಜೆಟ್ ಭಾಷಣದಲ್ಲಿ ಕೂಡ ಹೇಳಿದ್ದೇನೆ. ಕುಡಿಯುವ ನೀರಿನ ಅಭಾವ ನಮ್ಮ ತಾಲ್ಲೂಕಿನಲ್ಲ ಬೇಕಾದಷ್ಟಿದೆ, ಇದನ್ನು ತಾವು